## ನಾಗೇಶ ಹೆಗಡೆ

ಕಲೆ: ಬಿ.ಜಿ. ಗುಜ್ಜಾರಪ್ಪ

ಪೆಟ್ರೋಲು ದರ ಈಗೇನೋ ತಾಳೆ ಮರದೆತ್ತರಕ್ಕೆ ಏರಿದೆ. ಹಿಂದೆ ಅದು ಬಾಳೆ ಮರದಷ್ಟು ಎತ್ತರಕ್ಕೆ ಏರಿದ್ದಾಗಲೇ ನಾವೆಲ್ಲ ಬದಲೀ ಇಂಧನದ ಬಗ್ಗೆ ಯೋಚಿಸುತ್ತಿದ್ದೆವು.

ಹತ್ತು ವರ್ಷಗಳ ಹಿಂದೆ ನಾವು ಇದೇ ತಾಳೆ, ಬಾಳೆ ಇತ್ಯಾದಿಗಳಿಂದ ಇಂಧನತೈಲ ಪಡೆಯುವ ಕುರಿತು ಉಡುಪಿಯಲ್ಲಿ ಒಂದು ಕೃಷಿ ಕಮ್ಮಟವನ್ನು ನಡೆಸಿದ್ದೆವು. 'ಕೃಷಿಕರ ಕೈಗೆ ಲೇಖನಿ ಹೆಸರಿನಲ್ಲಿ ಯುವರೈತರಿಗೆ ಬರವಣಿಗೆಯ ತರಬೇತಿ ಕೊಡುವ ಅಭಿಯಾನದ ಒಂದು ಭಾಗವಾಗಿ ಈ ಸಭೆ ನಡೆದಿತ್ತು. 'ತಾಳಿದವ ಬಾಳಿಯಾನು' ಎಂಬುದಕ್ಕೆ ಒತ್ತುಕೊಟ್ಟು, ರೈತ ಸಮುದಾಯದ ಗಮನವನ್ನು ಈ ಹಳೇ ಇಂಧನಗಳ ಕಡೆ ತಿರುಗಿಸುವ ಗುರಿ ನಮ್ಮದಾಗಿತ್ತು.

ಬೈಕಿನ ಪೆಟ್ರೋಲ್ ಟ್ಯಾಂಕಿಗೆ ಹೊಂಗೆ ಎಣ್ಣೆ, ಬೇವಿನೆಣ್ಣೆಯನ್ನು ಸುರಿದು ಗಾಡಿ ಓಡಿಸಬಹುದು ಎಂದು ವಿಜ್ಞಾನಿಗಳು ಆಗೆಲ್ಲ ಹೇಳುತ್ತಿದ್ದರು. ಅದಕ್ಕೂ ಹಿಂದಿನ ಕಾಲದಲ್ಲಿ ರಸ್ತೆಗಳ ಎರಡೂ ಬದಿಗಳಲ್ಲಿ ಹೊಂಗೆ ಮರ, ಇಪ್ಪೆ ಮರ ಎಲ್ಲ ಸಾಲು ಸಾಲಾಗಿದ್ದವು. ಹೊಂಗೆ ಎಣ್ಣೆ, ಇಪ್ಪೆ ಎಣ್ಣೆ ಎಲ್ಲ ಊರುಗಳಲ್ಲಿ ಸಿಗ್ತಾ ಇತ್ತು. ಆದರೆ, ರಸ್ತೆ ವಿಸ್ತರಣೆಗೆ ಅಂತ ಎಲ್ಲ ಹೊಂಗೆ ಮರ, ಇಪ್ಪೆ ಮರ ಬಲಿಯಾದುವಲ್ಲ? ರಸ್ತೆ ಏನೋ ದೊಡ್ಡದಾದವು. ಆದರೆ, ಅದೇ ರಸ್ತೆಯಲ್ಲಿ ಬೈಕ್ ಓಡಿಸೋಣ ಅಂದ್ರೆ ಆ ಎಣ್ಣೆನೂ ಸಿಗ್ತಾ ಇಲ್ಲ, ಪೆಟ್ರೋಲೂ ದುಬಾರಿ. ಏನು ಮಾಡೋಣ?

ಹೊಂಗೆ ಎಣ್ಣೆ ಬಿಟ್ಟು ನಮ್ಮ ಚರ್ಚೆ ಕ್ರಮೇಣ ಎಳ್ಳೆಣ್ಣೆ, ಸೇಂಗಾ ಎಣ್ಣೆಯ ಕಡೆಗೂ ವಾಲುತ್ತಿತ್ತೇನೊ. ನಮ್ಮ ವಿಚಾರಗೋಷ್ಠಿ ಉಡುಪಿ ಸಮೀಪ ಇತ್ತಾದ್ದರಿಂದ ಸಹಜವಾಗಿ ಯಾರೋ ಒಬ್ಬರು "ಕೊಬ್ರಿ ಎಣ್ಣೆ" ಬಳಸಿದರೆ ಹೇಗೆ ಎಂದು ಕೇಳಿದರು.

ಕೆಲವರು ಮೂಗು ಮುರಿದರು. ಛೆ, ಕೊಬ್ರಿ ಎಣ್ಣೇನಾ? ಕೇರಳ, ತಮಿಳುನಾಡಿನ ರಸ್ತೆಗಳಲ್ಲಿ ಯಾವುದೇ ಮಹಿಳೆ ಟೂ ವೀಲರ್ ಸವಾರಿ ಮಾಡುತ್ತಿದ್ದರೆ ಅವರ ತಲೆಕೂದಲಿನಿಂದ ಅದೇ ಕಮಟು ವಾಸನೆ ಬರುತ್ತದೆ. 'ಬೇಡಪಾ' ಎಂದು ಶ್ರೀಕಂಠು ಘೋಷಿಸಿದ. 'ಅದು ಭಾರೀ ಕಮಟು' ಎಂದ.

ನಮ್ಮ ಕಮ್ಮಟದಲ್ಲಿದ್ದ ಸ್ತ್ರೀವಾದಿಗಳು ಪ್ರತಿಭಟಿಸಿದರು. 'ಗಂಡಸರ ತಲೆ ಅಂದರೆ ಹೀಗೇ! ಅದರಿಂದಲೂ ಕಮಟು ವಾಸನೆ ಬರೋದಿಲ್ಲವಾ ಶ್ರೀ ಕಮಠೂ?' ಎಂದು ಶ್ರೀಕಂಠುವಿನ ಕಾಲೆಳೆದರು ಸುರೇಖಾ.

ವಿಷಯ ಎತ್ತೆತ್ತಲೋ ಹೋಗುತ್ತಿದ್ದಾಗ ಕಮ್ಮಟದ ನಿರ್ದೇಶಕ ಪಡ್ರೆಯವರು ಈ ಚರ್ಚೆಯ ಗಿಯರ್ ಬದಲಿಸಿದರು. ಪೆಟ್ರೋಲ್, ಡೀಸೆಲ್ ಬದಲು ಯಾವುದೇ ಎಣ್ಣೆಬೀಜದ ತೈಲವನ್ನು ಹಾಕಿದರೂ ಗಾಡಿ ಓಡಿಸಬಹುದು ಎಂದರು.

'ಯಾವ ಎಣ್ಣೆನಾದರೂ ಹಾಕಬಹುದಾ?' ಎಂದು ತುಂಟ ನಗು ನಕ್ಕು ಹರ್ಷ ಕೇಳಿಬಿಟ್ಟ. ಈಗಿನ ದಿನಗಳಲ್ಲಿ ಆಲ್ಕೊಹಾಲ್‌ಗೆ 'ಎಣ್ಣೆ' ಎಂಬ ನಾಟೀ ಪದವೇ ಜಾಸ್ತಿ ಬಳಕೆಯಾಗುತ್ತಿದೆ. ಆ ಎಣ್ಣೆಯನ್ನೇ ಹಾಕಿ ಗಾಡಿ ಓಡಿಸುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ.

'ಅವರು ಓಡಿಸುವ ಗಾಡಿಯ ಹಾಗೆ ಈ ಚರ್ಚೆಯೂ ಅಡ್ಡಾದಿಡ್ಡಿ ಓಡ್ತಾ ಇದೆ; ಸಸ್ಯತೈಲಕ್ಕೆ ಬರೋಣ' ಎಂದು ನಾನೆಂದೆ.

ಎಲ್ಲರೂ ಗಪ್‌ಚಿಪ್ ಆಗಿದ್ದರಿಂದ ನಾನೇ ಮಾತನ್ನು ಮುಂದುವರೆಸಬೇಕಾಯಿತು.

'ಇನ್ ಫ್ಯಾಕ್ಟ್, ರಡಾಲ್ಫ್ ಡೀಸೆಲ್ ಎಂಬಾತ 1899ರಲ್ಲಿ ಮೊದಲನೇ ಬಾರಿ ಡಿಸೈನ್ ಮಾಡಿದ